ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	650(823)
ಸದಸ್ಯರ ಹೆಸರು	:	ಶ್ರೀ ಅ.ದೇವೇಗೌಡ (ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ	:	20-12-2021
ಉತ್ತರಿಸುವ ಸಚಿವರು	:	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
(ಅ)	1991ರಲ್ಲಿ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದ ಶಿಕ್ಷಕರು ಹಾಗೂ ಉಪನ್ಯಾಸಕರು ಖಾಯಂಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು ಬಂದಿದೆ. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 239 ಎಸ್‌ಇಎಸ್ 88 ದಿನಾಂಕ:19-02-1991ರಲ್ಲಿ ರಚಿಸಲಾಗಿರುವ 1990ರ ವಿಶೇಷ ನಿಯಮಗಳನ್ವಯ ಖಾಯಂಗೊಳಿಸಿರುವ/ ವಿಲೀನಗೊಳಿಸಿರುವ ಗುತ್ತಿಗೆ ಶಿಕ್ಷಕರ/ ಉಪನ್ಯಾಸಕರುಗಳ ವಿವರ ಈ ಕೆಳಕಂಡಂತಿದೆ- ಪ್ರಾಥಮಿಕ ಶಾಲಾ ಶಿಕ್ಷಕರು — 3726 ಪ್ರೌಢ ಶಾಲಾ ಸಹ ಶಿಕ್ಷಕರು — 3665 ಉಪನ್ಯಾಸಕರುಗಳು — 725
(ಆ)	ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಶಿಕ್ಷಕರು ಹಾಗೂ ಉಪನ್ಯಾಸಕರು ಸರ್ಕಾರಿ ಕೆಲಸಕ್ಕೆ ಸೇರುವುದಕ್ಕೆ ವಯೋಮಿತಿ ಮೀರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಅತಿಥಿ ಶಿಕ್ಷಕರನ್ನು ತಾತ್ಕಾಲಿಕವಾಗಿ ನಿರ್ದಿಷ್ಟ ಅವಧಿಗೆ ಮಾತ್ರ ಗೌರವ ಸಂಭಾವನೆಯನ್ನು ನೀಡುವ ಮೂಲಕ ನೇಮಕಾತಿ ಮಾಡಿಕೊಳ್ಳಲಾಗುತ್ತಿರುವುದರಿಂದ ಸರ್ಕಾರಿ ಕೆಲಸಕ್ಕೆ ಸೇರುವುದಕ್ಕೆ ವಯೋಮಿತಿ ಮೀರುತ್ತಿರುವ ಪ್ರಶ್ನೆ ಉದ್ಭವಿಸುವುದಿಲ್ಲ.
(ಇ)	ಗುತ್ತಿಗೆ ಆಧಾರದ ಮೇಲೆ ಅತಿಥಿ ಶಿಕ್ಷಕರು ಹಾಗೂ ಉಪನ್ಯಾಸಕರು ಎಲ್ಲಾ ಅರ್ಹತೆ ಹೊಂದಿರುವುದನ್ನು ಖಾಯಂ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳಲು ನಿರ್ಧಾರ ಮಾಡಿದೆಯೇ?	ಪ್ರಶ್ನೆ ಉದ್ಭವಿಸುವುದಿಲ್ಲ.

ಇಪಿ 215 ಡಿಜಿಡಬ್ಲ್ಯೂ 2021

(ಬಿ.ಸಿ. ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು